


ಡಾಂಬರು–ಸಿಮೆಂಟುಗಳ ಬದಲಾಗಿ ಹಿಮದಿಂದಲೇ ರೂಪುಗೊಂಡಂತೆ ಕಾಣಿಸುವ ಟೆಗೆರೆನ್ಸಿಯ ರಸ್ತೆಗಳು

## ಹೋಗುವುದು ಹೇಗೆ?

ಜರ್ಮನಿಯ ಮ್ಯೂನಿಕ್ ನಗರದಿಂದ ಟೆಗೆರೆನ್ಸಿ ಲೇಕ್ ಪ್ರದೇಶಕ್ಕೆ ಒಂದೂವರೆ ಗಂಟೆಯ ಪಯಣ ಬೇಕಾಗುತ್ತದೆ.

ಅಲ್ಲಿಗೆ ಹೋಗಲು ರೈಲು, ಬಸ್ಸು ಸಂಪರ್ಕ ಸಹ ಇದೆ. ಜರ್ಮನಿಗೆ ಹೋದವರಿಗೆ ಒಂದು ದಿನದ ಪಿಕ್ನಿಕ್‌ಗೆ ಟೆಗೆರೆನ್ಸಿ ಲೇಕ್ ಹೇಳಿಮಾಡಿಸಿದ ಪ್ರವಾಸಿ ತಾಣವಾಗಿದೆ. ಆಸ್ಟ್ರಿಯಾದ ಗಡಿ ಭಾಗಕ್ಕೂ ಇದು ತೀರಾ ಹತ್ತಿರ.



ಅಲ್ಲಿಂದ ರೈಲುನಿಲ್ದಾಣ ತಲುಪಿ, ಮ್ಯೂನಿಕ್ ರೈಲಿನಲ್ಲಿ ಕಿಟಕಿಯ ಪಕ್ಕವೇ ಕೂತು, ಶೂ ಕಳಚಿ, ಅಲ್ಲಿ ಚಾಲೂ ಆಗಿದ್ದ ಹೀಟರ್ ಶಾಖಕ್ಕೆ ಕಾಲೊಡ್ಡಿ ಬಿಸಿಯೇರಿಸಿಕೊಂಡ ಮೇಲೇ ಒಂದಿಷ್ಟು ಸಮಾಧಾನ. ‘ಟೆಗೆರೆನ್ಸಿ’ನೂ ಬೇಡ, ಏನೂ ಬೇಡ. ನೇರ ಮ್ಯೂನಿಕ್ ಹೋಗೋಣ’ ಎಂದೆ. ಅರ್ಧಗಂಟೆಗೆ ‘ಬಾದ್ ಟೋಲ್ಝ್’ ಎನ್ನುವ ನಿಲ್ದಾಣ ಬಂದಿತು. ಕಾಲು ಚೇತರಿಸಿಕೊಂಡಿತ್ತು. ‘ಟೆಗೆರೆನ್ಸಿ ಲೇಕ್’ ನೋಡದೆ ಇರಬೇಡಿ’ ಅಳಿಯನ ಮಾತು ಗುಂಯ್‌ಗುಟ್ಟಿತು. ರೈಲು ಹೆಚ್ಚು ಸಮಯ ನಿಲ್ಲೋದಿಲ್ಲ. ಇಳಿಯದಿದ್ದರೆ ಟೆಗೆರೆನ್ಸಿ ಇಲ್ಲ. ಕಾಲು ನಮಗರಿವಿಲ್ಲದೇ ಇಳಿಸೇಬಿಟ್ಟಿತು – ಟೆಗೆರೆನ್ಸಿ ರೈಲು ಹತ್ತಲು.

ಅಲ್ಲಿಂದ ಒಂದರ್ಧ ಗಂಟೆಯ ಹಾದಿ ಟೌನಿಗೆ. ರೈಲಿನ ಚಂದದ ಕಿಟಕಿಗಳಿಂದ ಕಂಡ ಹಾದಿಯುದ್ದ ಸುರಿದ ಹಿಮಸೌಂದರ್ಯ ಅಸೀಮವಾಗಿತ್ತು. ಉದ್ದಾನುದ್ದದ ಬಯಲು ಹಿಮದ ಹೊದಿಕೆಯಲ್ಲಿ ಬೆಳ್ಳನೆ ಹಿಮಚಾದರದಂತಿದ್ದರೆ ಅದರ ಮೇಲೆ ಸ್ಕೀಯಿಂಗ್ ಮಾಡುವ ಉತ್ಸಾಹೀ ಜರ್ಮನ್ನರ ಬಿಂಬಗಳು ಚೇತೋಹಾರಿಯಾಗಿದ್ದವು. ಇನ್ನೊಂದು ಬದಿಗೆ ಉದ್ದಾನುದ್ದದ ಕೋನಿಫೆರಸ್ ಜಾತಿಯ ಕಾಡು. ಮರಮರದ ಸೂಚೀಪರ್ಣದ ಮೇಲೂ ಕೊಂಬೆಗಳ ಮೇಲೂ ಹೆಪ್ಪುಗಟ್ಟಿ ನಿಂತು ಕೆಳಮುಖನಾಗಿ ನೋಡುವ ಹಿಮದ ಬಗೆಬಗೆಯ ರೂಪ, ಹನಿಹನಿಯಾಗಿ ಜಿನುಗುವ ಮುತ್ತಿನಮಣಿಗಳಂಥ ಹಿಮದ ಹನಿಗಳು. ಹಸಿರುಕಾಡಿನ ಬದಲು ಶ್ವೇತಕಾಡು, ಇಳಿಜಾರಿನ ಚಾವಣಿಗಳ ಮೇಲೆ ಅಡಿಯೆತ್ತರದ ಹಿಮಚಾವಣಿ, ಒಟ್ಟಾರೆ ‘ಧವಳಧಾತ್ರಿ...’!

ಪುಟ್ಟ ಟೌನ್ ಹತ್ತಿರವಾಯ್ತು. ಹಿಮದಲ್ಲಿ ತೋಯ್ದ ಪುಟ್ಟ ಪುಟ್ಟ ಮನೆಗಳು ಕಂಡವು. ಹಾಗೆ ಹೀಗೆ ತಿರುವಿನಲ್ಲಿ ಮರಗಳ ಸಂದಿಸಂದಿಯಲ್ಲಿ ‘ಟೆಗೆರೆನ್ಸಿ’ ಲೇಕ್ ಹಣಕಿ, ಇಣುಕಿ ನಮಗಾಗಿ ಕಾಯುತ್ತಿರುವಂಥ ಭ್ರಮೆಯಲ್ಲಿ ನಾನು ತೀವ್ರ ಉತ್ಸಾಹದಲ್ಲಿದ್ದರೆ, ಬಹುಷಃ ಅಲ್ಲಿದ್ದವರು ಆಗಲೇ ಕಂಡವರೇನೋ, ಬರೀ ಹರಟೆಯಲ್ಲಿದ್ದರು. ಪುಟ್ಟ ನಿಲ್ದಾಣ, ರೈಲು ನಿಂತಿತು. ಆಗ ಸಂಜೆಯ ಆರು ಗಂಟೆ. ಕೇವಲ ಎರಡು ಗಂಟೆ ಮಾತ್ರ ಸಮಯ. ಇದೇ ಕೊನೇ ರೈಲು ಮ್ಯೂನಿಕ್‌ಗೆ. ಎಂಟಕ್ಕೆ ಪಕ್ಕಾ ಹೊರಡೋದೇ. ಸರಿ ಇಳಿದು ದಢದಢನೆ ಹೊರಬಂದರೆ ಅಬ್ಬಬ್ಬಾ, ಅದೆಂಥ ಊರು ಎಂದು ಬೆರಗಾಗದಿರಲು ಸಾಧ್ಯವೇ ಇಲ್ಲ. ಮಳೆ ಬಂದು ನಿಂತು ತೊಳೆದಿಟ್ಟಂತೆ ಶುಭ್ರಾತಿಶುಭ್ರ. ಅಲ್ಲೇ ಊರಿನ ಪ್ರತಿಷ್ಠಿತ ಐತಿಹಾಸಿಕ ಕಟ್ಟಡಗಳೆಲ್ಲಾ ಜಮೆಯಾಗಿರುವುದು. ಕಾಲ್ನಡಿಗೆಯಲ್ಲೇ ಸರೋವರದ ಕಡೆಗೆ ಹೊರಟೆವು...!

‘ಟೆಗೆರೆನ್ಸಿ’ ಟೌನ್ (‘ಟೀಗಾರ್ನ್‌ಸಿ’ ಎಂದೂ ಉಚ್ಚಾರವಿದೆ) ಬವೇರಿಯನ್ ರಾಜ್ಯದ ಗಿರಿಧಾಮ. ಸಮುದ್ರಮಟ್ಟದಿಂದ 2450 ಅಡಿ ಎತ್ತರದಲ್ಲಿರುವ ಅದರ ಮೊದಲ ಆಕರ್ಷಣೆಯೇ ಸುಮಾರು ಆರೂವರೆ ಕಿ.ಮೀ ಉದ್ದದ ‘ಟೆಗೆರೆನ್ಸಿ ಲೇಕ್’. ಸುತ್ತಲೂ ಆಲ್ಪ್ಸ್‌ನ ಧೀಮಂತ ಪರ್ವತಶ್ರೇಣಿಗಳಿದ್ದು, ಅವು ತನ್ನ ಮಡಿಲಲ್ಲಿ ಈ ಸರೋವರವನ್ನು ಹುದುಗಿಸಿಟ್ಟುಕೊಂಡಿವೆ.

‘ಇಲಿರಿಯಾನ್ಸ್’ ಎನ್ನುವ ಇಲ್ಲಿನ ಇಂಡೋ–ಯೂರೋಪಿಯನ್ ಮೂಲಜನಾಂಗಕ್ಕೆ ಸಹಸ್ರಾರು ವರ್ಷಗಳ ಪ್ರಾಚೀನತೆ ಇದೆ ಎಂದು ಇತಿಹಾಸ ಹೇಳುತ್ತದೆ. ಆದರೆ, ಲಿಖಿತ ಇತಿಹಾಸ ಮಾತ್ರ 6ನೇ ಶತಮಾನದ ಬವೇರಿಯನ್ನರ ಆಗಮನದ ನಂತರದ್ದು. ಮಹಾಯುದ್ಧಗಳಲ್ಲಿ